# ಪಶುವೈದ್ಯ ವಿವಿ 437 ಹುದ್ದೆಗಳು ಶೀಘ್ರ ಭರ್ತಿ

- ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಅನುಮೋದನೆ: ಸಚಿವ ಪ್ರಭು ಚವ್ಹಾಣ್
- 371 ಜೆ ಅಡಿ ಕಲ್ಯಾಣ ಕರ್ನಾಟಕಕ್ಕೆ 226 ಹುದ್ದೆಗಳು ಮಂಜೂರು

**ಬೆಂಗಳೂರು:** ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ 217 ಬೋಧಕ ಮತ್ತು 220 ಬೋಧಕೇತರ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆ ಅನುಮೋದನೆ ನೀಡಿದ ಎಂದು ಪಶು ಸಂಗೋಪನೆ ಸಚಿವ ಪ್ರಭು ಬಿ.ಚವ್ಹಾಣ್ ಹೇಳಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿ, ಪಶುವೈದ್ಯ ವಿಶ್ವವಿದ್ಯಾಲಯದಲ್ಲಿ ಖಾಲಿ ಇದ್ದ 217 ಬೋಧಕ ಮತ್ತು 220 ಬೋಧಕೇತರ ಸಿಬ್ಬಂದಿ ನೇಮಕ ಕುರಿತ ಪ್ರಸ್ತಾವನೆಗೆ ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದ್ದು, ಶೀಘ್ರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಈ ಪೈಕಿ ಕಲ್ಯಾಣ ಕರ್ನಾಟಕ ಭಾಗದ 371 ಜೆ ಮೀಸಲಾತಿ ಅಡಿಯಲ್ಲಿ 104 ಬೋಧಕ ಮತ್ತು 122 ಬೋಧಕೇತರ ಹುದ್ದೆಗಳಿವೆ. ಬೆಳಗಾವಿ ಜಿಲ್ಲೆಯ ಅಥಣಿ ವೈದ್ಯಕೀಯ ಮಹಾವಿದ್ಯಾಲಯ ಪ್ರಾರಂಭಕ್ಕಾಗಿ 77 ಬೋಧಕರು ಹಾಗೂ 98 ಬೋಧಕೇತರ ಹುದ್ದೆಗಳು ಮಂಜೂರಾಗಿದ್ದು, ಶೀಘ್ರದಲ್ಲಿ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗುವುದು ಎಂದಿದ್ದಾರೆ.

ಕರ್ನಾಟಕ ಪಶು ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಹಲವು ವರ್ಷಗಳಿಂದ ಖಾಲಿ ಇದ್ದ 36 ಬ್ಯಾಕ್‌ಲಾಕ್ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಮಾಹಿತಿ ನೀಡಿದ್ದಾರೆ.

**ಅಥಣಿ ಮಹಾವಿದ್ಯಾಲಯ ಕಟ್ಟಡ ಪೂರ್ಣ:** ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಕಳೆದ ಅವಧಿಯಲ್ಲಿ ಸಾಮಾಜಿಕ ಚಿಂತಕ ಭಾವುರಾವ್ ದೇಶಪಾಂಡೆ ಸ್ಮರಣಾರ್ಥ ಬೆಳಗಾವಿ ಜಿಲ್ಲೆಗೆ ಪಶುವೈದ್ಯಕೀಯ ಮಹಾವಿದ್ಯಾಲಯ ಘೋಷಣೆ ಮಾಡಿದ್ದರು. ಈ ಸಂಬಂಧ ಅಥಣಿ ತಾಲೂಕಿನ ಕೊಕಟನೂರು ಸಮೀಪದಲ್ಲಿ 200 ಎಕರೆ ವಿಶಾಲ ಪ್ರದೇಶದಲ್ಲಿ ಕಾಲೇಜು ಕಟ್ಟಡ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಈ ಮಹಾವಿದ್ಯಾಲಯಕ್ಕೆ ಸಂಬಂಧಿಸಿದಂತೆ ಈ ಹಿಂದೆ ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರ ಸಮ್ಮುಖದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಬಾಕಿ ಇದ್ದ ನಿರ್ಮಾಣ ಕಾಮಗಾರಿ ಕುರಿತು ಶೀಘ್ರದಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳು-ಸಿಬ್ಬಂದಿಗೆ ತಾಕೀತು ಮಾಡಲಾಗಿತ್ತು. ಅದರಂತೆ ಕಾಮಗಾರಿ ಮುಗಿದಿದೆ ಎಂದು ಹೇಳಿದ್ದಾರೆ.

ಈ ಭಾಗದ ಹೈನುಗಾರಿಕೆ ಮತ್ತು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗುವ ನಿಟ್ಟಿನಲ್ಲಿ ಪಶು ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪಿಸುವ ಮೂಲಕ ಭಾವುರಾವ್ ದೇಶಪಾಂಡೆ ಅವರಿಗೆ ಗೌರವ ಸಲ್ಲಿಸಿದಂತಾಗಿದೆ ಎಂದರು.

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಸ್. ಎಲ್. ಭೋಜೇಗೌಡ. (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 310 |
| ಉತ್ತರಿಸಬೇಕಾದ ದಿನಾಂಕ | : | 14.09.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಪಶು ಆಸ್ಪತ್ರೆಗಳು ದುರಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಈ ಸಾಲಿನಲ್ಲಿ ಸರ್ಕಾರದಿಂದ ಎಷ್ಟು ಆಸ್ಪತ್ರೆಗಳ ಕಟ್ಟಡ ಅಭಿವೃದ್ಧಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ರಾಜ್ಯದ ಪಶು ಆಸ್ಪತ್ರೆಗಳು ದುರಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಸದರಿ ಕಾಮಗಾರಿಗಳನ್ನು ನಿರ್ವಹಿಸಲು ಜಿಲ್ಲಾ ಪಂಚಾಯತ್ ಲೆಕ್ಕ ಶೀರ್ಷಿಕೆ:2403-00-101-0-28 (ಕಟ್ಟಡಗಳ ನಿರ್ವಹಣೆ) ಅಡಿಯಲ್ಲಿ ರೂ.22.25 ಕೋಟಿ ಅನುದಾನ ನಿಗದಿಯಾಗಿದ್ದು, ಜಿಲ್ಲಾವಾರು ಅನುದಾನದ ವಿವರ ಅನುಬಂಧದಲ್ಲಿ ನೀಡಲಾಗಿದೆ.<br><br>ಜಿಲ್ಲಾ ಪಂಚಾಯತ್‌ಗಳಲ್ಲಿ ಕ್ರಿಯಾ ಯೋಜನೆ ಅನುಮೋದನೆಯಾಗುವ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ. ಕಾಮಗಾರಿಗಳ ವಿವರವು ತಾಲ್ಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ. |
| ಆ) | ರಾಜ್ಯದ ಪಶು ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸಲು ವೈದ್ಯಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಇ) | ಬಂದಿದ್ದಲ್ಲಿ, ಈ ಸಿಬ್ಬಂದಿಯನ್ನು ಯಾವ ಸಾಲಿನಲ್ಲಿ ಭರ್ತಿ ಮಾಡಲಾಗುವುದು? | ಪ್ರಸ್ತುತ 400 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ ಹಾಗೂ 250 ಕಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು KEA ರವರ ಮುಖಾಂತರ ಅಧಿಸೂಚನೆಯನ್ನು ಹೊರಡಿಸಲು ಕ್ರಮವಹಿಸಲಾಗುತ್ತಿದೆ.<br><br>ಕಲ್ಯಾಣ ಕರ್ನಾಟಕ ಪ್ರಾದೇಶಿಕ ವೃಂದಕ್ಕೆ ಸಂಬಂಧಿಸಿದಂತೆ ಅನುಚ್ಛೇದ 371 (ಜೆ) ರಡಿ ಕಿರಿಯ ಪಶುವೈದ್ಯಕೀಯ ಪರೀಕ್ಷಕರ 79 ಅರ್ಹ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ:16.05.2022 ರಂದು ಹಾಗೂ ಪಶುವೈದ್ಯಕೀಯ ಪರೀಕ್ಷಕರ 32 ಅರ್ಹ ಅಭ್ಯರ್ಥಿಗಳ |

| | | |
|---|---|---|
| | | ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ:13.07.2022 ರಂದು ಪ್ರಕಟಿಸಿ ಸಿಂಧುತ್ವ ಹಾಗೂ ಪೋಲಿಸ್ ಪರಿಶೀಲನಾ ವರದಿಗಳನ್ನು ಸಲ್ಲಿಸುವಂತೆ ಕೋರಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಗೆ ಪತ್ರ ಬರೆಯಲಾಗಿರುತ್ತದೆ. ಸದರಿ ವರದಿಗಳು ಸ್ವೀಕೃತಗೊಂಡ ಕೂಡಲೇ ನೇಮಕಾತಿ ಆದೇಶ ನೀಡಲು ಕ್ರಮವಹಿಸಲಾಗುವುದು. |

**ಇ– ಪಸಂಮೀ 198 ಸಲೆವಿ 2022**

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

# ಅನುಬಂಧ-1

| ಲೆಕ್ಕ ಶೀರ್ಷಿಕೆ:2403-00-101-0-28 ಕಟ್ಟಡಗಳ ನಿರ್ವಹಣೆ | | | |
|---|---|---|---|
| ಕ್ರ. ಸಂ. | ಜಿಲ್ಲೆಗಳು | ಕ್ರಿಯಾ ಯೋಜನೆಯಲ್ಲಿ ನಿಗದಿಯಾದ ಅನುದಾನ (ರೂ. ಲಕ್ಷಗಳಲ್ಲಿ) | ಷರಾ |
| 1 | ಬೆಂಗಳೂರು ನಗರ | 60.00 | |
| 2 | ಬೆಂಗಳೂರು ಗ್ರಾಮಾಂತರ | 45.00 | |
| 3 | ಚಿಕ್ಕಬಳ್ಳಾಪುರ | 70.00 | |
| 4 | ಚಿತ್ರದುರ್ಗ | 80.00 | |
| 5 | ದಾವಣಗೆರೆ | 63.56 | |
| 6 | ಕೋಲಾರ | 60.00 | |
| 7 | ರಾಮನಗರ | 100.00 | |
| 8 | ತುಮಕೂರು | 138.00 | |
| 9 | ಶಿವಮೊಗ್ಗ | 62.00 | |
| 10 | ಮೈಸೂರು | 127.50 | |
| 11 | ಚಾಮರಾಜನಗರ | 155.00 | |
| 12 | ಚಿಕ್ಕಮಗಳೂರು | 60.00 | |
| 13 | ದಕ್ಷಿಣ ಕನ್ನಡ | 150.00 | |
| 14 | ಹಾಸನ | 90.00 | |
| 15 | ಕೊಡಗು | 50.00 | |
| 16 | ಮಂಡ್ಯ | 75.00 | |
| 17 | ಉಡುಪಿ | 35.00 | |
| 18 | ಬೆಳಗಾವಿ | 125.00 | |
| 19 | ಬಾಗಲಕೋಟೆ | 60.00 | |
| 20 | ವಿಜಯಪುರ | 55.00 | |
| 21 | ಧಾರವಾಡ | 90.00 | |
| 22 | ಗದಗ | 30.00 | |
| 23 | ಹಾವೇರಿ | 85.00 | |
| 24 | ಉತ್ತರ ಕನ್ನಡ | 75.00 | |
| 25 | ಕಲಬುರ್ಗಿ | 75.00 | |
| 26 | ಬಳ್ಳಾರಿ | 22.00 | |
| 27 | ಬೀದರ್ | 35.00 | |
| 28 | ಕೊಪ್ಪಳ | 40.00 | |
| 29 | ರಾಯಚೂರು | 48.00 | |
| 30 | ಯಾಧಗಿರಿ | 30.00 | |
| 31 | ವಿಜಯನಗರ | 34.10 | |
| ಒಟ್ಟು | | 2225.16 | |